# ಶ್ರೀಮಾತೆಯವರೊಡನೆ ಮಾತುಕತೆ



**ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು**

**೧೪.೯.೧೯೧೨ (ರಾಧಾಷ್ಟಮಿಯ ದಿವಸ)**

ಶ್ರೀಮಾತೆಯವರು ನಂತರ ಮಹಡಿಯಲ್ಲಿ ಗೋಲಾಪ್‌ಮಾಳ ಕೋಣೆಯ ಹೊಸ್ತಿಲಲ್ಲಿ ತಲೆಯಿಟ್ಟು ಮಲಗಿದ್ದಾರೆ. ನಾನು ಹೇಗೆ ಒಳಗೆ ಹೋಗಲಿ ಎಂದು ಕೊಳ್ಳುವಷ್ಟರಲ್ಲಿ ನನ್ನನ್ನು ನೋಡಿ – "ಬಾಮ್ಮಾ, ಅದರಲ್ಲೇನು ದೋಷ?" ಎಂದು ತಲೆಯನ್ನು ಸ್ವಲ್ಪ ಮೇಲೆತ್ತಿದ್ದರು. ನಾನು ಒಳಗೆ ಹೋಗಿ ಹತ್ತಿರ ಕುಳಿತು ಗಾಳಿ ಬೀಸಲಾರಂಭಿಸಿದೆ. ಶ್ರೀಮಾತೆಯವರಿಗೆ ಯಾವಾಗಲೂ ಈ ರೀತಿ ಹೊಂದಿಕೊಂಡು ಹೋಗುವ ಸ್ವಭಾವ. ಮಲಗಿಕೊಂಡೇ ಅವರು ಗೌರೀ ಮಾ ಶಾಲೆಯ ಸಂಬಂಧವಾಗಿ ಹಲವಾರು ಮಾತುಕತೆ ಪ್ರಾರಂಭಿಸಿದರು. ಅಷ್ಟರಲ್ಲಿ ಇಬ್ಬರು ಸ್ತ್ರೀ ಭಕ್ತರು ಮೇಲೆ ಬಂದರು. ಅವರಲ್ಲಿ ಒಬ್ಬಳು ಶ್ರೀಮಾತೆಯವರ ಕೂದಲನ್ನು ಒಣಗಿಸುತ್ತಾ ಕೆಲವು ಬಿಳಿಕೂದಲುಗಳನ್ನು ತೆಗೆದು ಸೆರಗಿನಲ್ಲಿ ಕಟ್ಟಿಕೊಂಡಳು, "ಇದರಿಂದ ತಾಯತ ಮಾಡಿಕೊಳ್ಳುತ್ತೇನೆ" ಎಂದು. ಶ್ರೀಮಾತೆಯವರು ಲಜ್ಜೆಯಿಂದ ಆಕ್ಷೇಪಿಸಿದರು, "ಅದೇಕೆ? ಅಂತಹ ಕೂದಲನ್ನು ಎಷ್ಟು ಎಸೆದಿದ್ದೇನೆ?"

ಅನಂತರ ಶ್ರೀಮಾತೆಯವರು ಬಿಸಿಲು ಕಾಯಿಸಲು ಛಾವಣಿಗೆ ಹೋದರು. ನಾವು ಕೂಡ ಹಿಂಬಾಲಿಸಿದೆವು. ಅಷ್ಟರಲ್ಲಿ ಕೆಳಗಿನಿಂದ ಗೋಲಾಪ್ ಮಾಳ ಧ್ವನಿ ಕೇಳಿಸಿತು, "ಎಲ್ಲರೂ ಛಾವಣಿಗೆ ಹೋದರೆ, ಈಗ ಯಾರು ಯಾರು ಊಟ ಮಾಡುತ್ತಾರೆಂದು ಹೇಗೆ ತಾನೇ ತಿಳಿಯಬೇಕು?" ನಾನು ತಕ್ಷಣ ವಿಚಾರಿಸಿ ಹೋಗಿ ಹೇಳಿಬಂದೆ – "ವಿಧವೆಯರು ಬಿಟ್ಟು ಮಿಕ್ಕೆಲ್ಲರೂ ಪ್ರಸಾದ ತೆಗೆದುಕೊಳ್ಳುತ್ತಾರೆ." ಬಿಸಿಲಲ್ಲಿದ್ದ ಬಟ್ಟೆಗಳನ್ನು ತೆಗೆದು ಒಳಗಿಡುವಂತೆ ಶ್ರೀಮಾತೆಯವರು ನನಗೆ ಹೇಳಿದರು. ಅಷ್ಟರಲ್ಲಿ ಮಧ್ಯಾಹ್ನದ ನೈವೇದ್ಯಕ್ಕಾಗಿ ಶ್ರೀಮಾತೆಯವರು ಛಾವಣಿಯಿಂದ ಕೆಳಕ್ಕೆ ಇಳಿದರು. ಕೆಳಕ್ಕೆ ಬಂದಾಗ, ಆಗಾಗಲೇ ಶ್ರೀರಾಮಕೃಷ್ಣರಿಗೆ ನೈವೇದ್ಯದ ನಿವೇದನೆ ಆಗಿತ್ತು.

ಶ್ರೀರಾಮಕೃಷ್ಣರ ಕಾಲದ ಒಬ್ಬ ಮಹಿಳೆ ತನ್ನ ಸೊಸೆಯ ಜೊತೆ ಶ್ರೀಮಾತೆಯವರ ದರ್ಶನಕ್ಕಾಗಿ ಬಂದಿದ್ದಳು. ಶ್ರೀಮಾತೆಯವರು ಎಲ್ಲರಿಗೂ ಎಲೆ ಹಾಕಲು ಹೇಳಿದರು. ಎಲ್ಲರೂ ಕುಳಿದ ಮೇಲೆ ಶ್ರೀಮಾತೆಯವರು ಊಟದಿಂದ ಎರಡು ಮೂರು ಮುಷ್ಟಿ ತಿಂದು ನಮಗೆಲ್ಲ ಪ್ರಸಾದ ಕೊಟ್ಟರು. ಅಷ್ಟರಲ್ಲಿ ಪ್ರಸಾದ ತಿನ್ನುತ್ತಿದ್ದ ಆ ಮುದುಕಿ ಹೇಳಿದಳು, "ಆಹಾ! ಶ್ರೀರಾಮಕೃಷ್ಣರ ಉಪದೇಶಗಳನ್ನು ನಾವು ಪಾಲಿಸಿದ್ದೇ ಆಗಿದ್ದರೆ, ನಮಗೆ ಇಷ್ಟೊಂದು ಕಷ್ಟ ಎಲ್ಲಿ ಬರುತ್ತಿತ್ತು? ನಾವು ಸಂಸಾರವನ್ನು ನೆಚ್ಚಿಕೊಂಡೇ ಸಾಯುತ್ತಿದ್ದೇವೆ. ಯಾವಾಗಲೂ ನಮಗೆ ಕೆಲಸದ್ದೇ ಚಿಂತೆ." ಅದಕ್ಕೆ ಶ್ರೀಮಾತೆಯವರು ಹೇಳಿದರು, "ಕರ್ಮ ಬಹಳ ಒಳ್ಳೆಯದೇ. ಕೆಲಸ ಮಾಡುತ್ತ ಮಾಡುತ್ತ ಕರ್ಮಬಂಧನ ಕಳಚಿಹೋಗುತ್ತದೆ. ಅನಂತರ ತಾನೇ ನಿಷ್ಕಾಮ ಭಾವ ಬರುವುದು? ಒಂದು ಕ್ಷಣ ಸಹ ಕರ್ಮ ಮಾಡದೆ ಇರುವುದು ಒಳ್ಳೆಯದಲ್ಲ."

ಊಟವಾದ ಮೇಲೆ ಶ್ರೀಮಾತೆಯವರು ಮಂಚದ ಮೇಲೆ ಸ್ವಲ್ಪ ಕಾಲ ಮಲಗಿದರು. ಪ್ರತಿಯೊಬ್ಬರಿಗೂ ಶ್ರೀಮಾತೆಯವರ ಸೇವೆ ಮಾಡುವ ಆಸೆ. ಆದರೆ ಶ್ರೀಮಾತೆಯವರು ಅವರೆಲ್ಲರಿಗೂ ವಿಶ್ರಮಿಸಲು ಹೇಳಿದರು. ಸ್ವಲ್ಪ ಸಮಯದ ನಂತರ ಒಬ್ಬೊಬ್ಬರಾಗಿ ತಮ್ಮ ತಮ್ಮ ಕೆಲಸಗಳಿಗಾಗಿ ಹೊರಡಲು ಸಿದ್ಧರಾದರು. ನಾನು ಮತ್ತು ಈಗಾಗಲೇ ಉಲ್ಲೇಖಿಸಿದ ಶ್ರೀರಾಮಕೃಷ್ಣರ ಕಾಲದ ಮುದುಕಿ ಮಾತ್ರವೇ ಉಳಿದೆವು. ಹೀಗಾಗಿ ಶ್ರೀಮಾತೆಯವರ ಎಲ್ಲ ಸೇವೆಗಳನ್ನು ಮಾಡುವ ಸೌಭಾಗ್ಯ ಅಪ್ರಾರ್ಥಿತವಾಗಿ ನನಗೆ ಪ್ರಾಪ್ತವಾಯಿತು. ಆ ವಿಧವೆಯು ಶ್ರೀಮಾತೆಯವರ ಹತ್ತಿರ ಕುಳಿತುಕೊಂಡು ತನ್ನ ಸಂಸಾರದ ಗೋಳನ್ನೆಲ್ಲ ಹೇಳಿಕೊಳ್ಳಲು ಆರಂಭಿಸಿದಳು: "ಅಮ್ಮಾ, ನಿಮ್ಮ ಬಳಿ ನನ್ನ ದೋಷಗಳು ಬಹಳ ಅಲ್ಪವೆಂದು ಕಾಣಬಹುದು. ಆದರೆ, ಮನೆಯವರ ದೃಷ್ಟಿಯೇ ಬೇರೆ" ಎಂದೆಲ್ಲಾ ಹೇಳತೊಡಗಿದಳು.

ಮಾತಿನ ಮಧ್ಯದಲ್ಲಿ ನಾನು ಆ ಮುದುಕಿಯನ್ನು ಕೇಳಿದೆ, "ನೀವು ಶ್ರೀರಾಮಕೃಷ್ಣರನ್ನು ನೋಡಿದ್ದೀರಾ?" ಅವಳು ಹೇಳಿದಳು, "ಓ ಮಾ! ನೋಡಿಲ್ಲದೆ ಮತ್ತೇನು? ಅಲ್ಲದೆ ಅವರು ನಮ್ಮ ಮನೆಗೂ ಸಹ ಬರುತ್ತಿದ್ದರು. ಶ್ರೀಮಾತೆಯವರು ಆಗ ಬಹಳ ಚಿಕ್ಕವರು." "ಶ್ರೀರಾಮಕೃಷ್ಣರ ಬಗ್ಗೆ ಸ್ವಲ್ಪ ಹೇಳಿ, ಕೇಳೋಣ" ಎಂದೆ. "ನನ್ನನ್ನಲ್ಲ, ಶ್ರೀಮಾತೆಯವರನ್ನು ಕೇಳು. ಅವರು ಹೇಳುತ್ತಾರೆ" ಎಂದಳು ಆಕೆ. ಶ್ರೀಮಾತೆಯವರು ಕಣ್ಣನ್ನು ಮುಚ್ಚಿಕೊಂಡಿದ್ದರಿಂದ ಅವರನ್ನು ಕೇಳುವ ಸಾಹಸವನ್ನು ನಾನು ಮಾಡಲಿಲ್ಲ.

(ಮುಂದುವರಿಯುವುದು)